ದಿ: **14-02-2025** ರಂದು ಸಾಕ್ಷಿ ಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ವಾಟೀಸವಾಲು: ಶ್ರೀ ಬಿ.ಎಸ್.ಡಿ. ವಕೀಲರಿಂದ:**

**1.** ಈ ದಾವೆಯನ್ನು ಆದನಗೌಡ ಪ್ರತಿವಾದಿ **1** ರಿಂದ **6** ರವರ ಮೇಲೆ ಹೊಲದಲ್ಲಿ ಹೋಗಿ ಬರದಂತೆ ತಕರಾರು ಮಾಡಿದ್ದರಿಂದ ಸಲ್ಲಿಸಿರುತ್ತಾರೆ. ನಾನು ಜುಟಮರಡಿ ಗ್ರಾಮದಲ್ಲಿ ವಾಸ ಮಾಡುತ್ತಿದ್ದೇನೆ. ನನ್ನ ಹೆಂಡತಿ ಊರು ಸುಣ್ಣದ ಕಲ್. ನಾನು ಸುಣ್ಣದಕಲ್ ಗ್ರಾಮದಲ್ಲಿ ವಾಸ ಮಾಡುವುದಿಲ್ಲ. ವಾದಿ ಮತ್ತು ಪ್ರತಿವಾದಿಯರು ನನ್ನ **2**ನೇ ಅಣ್ಣ ತಮ್ಮಂದಿರಾಗಬೇಕು. ಹೊಲದಲ್ಲಿ ಬೋರವೆಲ್ ಹಾಕಿಸಿದ್ದು, ಪ್ರತಿವಾದಿಯರು ದೌರ್ಜನ್ಯ ಮಾಡುತ್ತಿದ್ದಾರೆ. ದಾವಾ ಹೊಲದ ಸ ನಂ **78,** ವಿಸ್ತೀರ್ಣ **02** ಎಕರೆ **08** ಗುಂಟೆ ವಾದಿಯ ಹೆಸರಿನಲ್ಲಿ ಇರುತ್ತದೆ. ಪೂರ್ವದಲ್ಲಿ ದಾವಾ ಆಸ್ತಿ ವಾದಿಯ ತಂದೆ ಯಂಕೋಬ ಇವರ ಹೆಸರಿನಲ್ಲಿತ್ತು ನಂತರ ವಾದಿ ಹೆಸರಿನಲ್ಲಿ ಮಾಡಿಸಿಕೊಂಡಿದ್ದಾರೆ. ಸ ನಂ **77** ಒಟ್ಟು **06-00** ಎಕರೆ ಇತ್ತು. ಈ ಹೊಲದಲ್ಲಿ **03-0** ಎಕರೆ ವಾದಿಗೆ ಬಂದಿರುತ್ತದೆ ಇನ್ನೂಳಿದ **03-00** ಎಕರೆ ವಾದಿಗೆ ಬಂದಿರುತ್ತದೆ. ವಾದಿಗೆ **03-00** ಎಕರೆ ಹೊಲ ಬಂದಿದೆ ಎಂದು ನಾನು ದಾಖಲೆಯನ್ನು ನೋಡಿಲ್ಲ. ನಿನ್ನ ಸಾಕ್ಷಿ ಪ್ರಮಾಣ ಪತ್ರ ಯಾವ ಭಾಷೆಯಲ್ಲಿ ಬರೆದಿದೆ ಎಂದರೆ ಸಾಕ್ಷಿಯು ನಾನು ಕನ್ನಡದಲ್ಲಿ ಹೇಳಿದ್ದೇನೆ ಅವರು ಕನ್ನಡದಲ್ಲಿ ಬರೆದಿದ್ದಾರೋ ಇಂಗ್ಲೀಷನಲ್ಲಿ ಬರೆದಿದ್ದಾರೋ ಗೊತ್ತಿಲ್ಲ. ಸಾಕ್ಷಿ ಪ್ರಮಾಣ ಪತ್ರ ಬರೆದ ಮೇಲೆ ಓದಿಸಿ ಹೇಳಿಲ್ಲ. ಅದಕ್ಕೆ ನಾನು ಹೆಬ್ಬೆಟ್ಟು ಸಹಿ ಮಾಡಿದ್ದೇನೆ.

**2.** ಸರ್ವೆ ನಂಬರ್ **77** ರಲ್ಲಿ ಕೆನಾಲ್ ವಾದಿ ಮತ್ತು ಪ್ರತಿವಾದಿಯರ ಹೊಲದಲ್ಲಿ ಹಾದು ಹೋಗಿದೆ ಎಂದರೆ ಸರಿ. ಪರಿಹಾರ ಹಣವನ್ನು ಯಾರು ತೆಗೆದುಕೊಂಡಿದ್ದಾರೆ ನಿಮಗೆ ಮಾಹಿತಿ ಇದೆಯಾ ಎಂದರೆ ಸಾಕ್ಷಿಯು ಮಾಹಿತಿ ಇಲ್ಲ ಎನ್ನುತ್ತಾರೆ. ಕೆನಾಲ್ ಹಾದು ಹೋಗಿರುವುದು ವಾದಿ ಮತ್ತು **6**ನೇ ಪ್ರತಿವಾದಿ ಹೆಸರಿನಲ್ಲಿರುವ ಪಹಣಿಯಲ್ಲಿ ಕಟ್ ಆಗಿರುತ್ತದೆ. ಕೆನಾಲ್ ಹಾದುಹೋಗಿರುವುದು **6**ನೇ ಪ್ರತಿವಾದಿಯ ಪಹಣಿಯಲ್ಲಿ ಮಾತ್ರ ಕಟ್ ಆಗಿದೆ ವಾದಿ ಪಹಣಿಯಲ್ಲಿ ಕಟ್ ಆಗಿಲ್ಲ ಎಂದರೆ ಸಾಕ್ಷಿಯು ಪಹಣಿ ಇದೆ ಎನ್ನುತ್ತಾರೆ. ಸ ನಂ **77** ರಲ್ಲಿ **6**ನೇ ಪ್ರತಿವಾದಿವೆಂಕಟೇಶನಿಗೆ **2-00** ಎಕರೆ ಹೊಲ ಇದೆ,

ವಾದಿ ಹೆಸರಿನಲ್ಲಿ **02** ಎಕರೆ **08** ಗುಂಟೆ ಜಮೀನು ಇದೆ**.** ವಾದಿಯ **02** ಎಕರೆ **08** ಗುಂಟೆ ಹೊಲದಲ್ಲಿ ಕೆನಾಲ್ ಹಾದು ಹೋಗಿದೆ ಎಂದರೆ ಸರಿ**.** ವಾದಿಯ ಜಮೀನಿನಲ್ಲಿ ಎಷ್ಟು ಗುಂಟೆ ಕೆನಾಲ್ ಹಾದು ಹೋಗಿದೆ ಎಂದು ನನಗೆ ಗೊತ್ತಿಲ್ಲ**.** **6**ನೇ ಪ್ರತಿವಾದಿ ಹೆಸರಿಗಿರುವ ಜಮೀನು ನೀರಾವರಿಯಾಗಿದೆ ಎಂದರೆ ಸರಿ**.** ಪ್ರತಿವಾದಿ **3, 6** ಮತ್ತು ವಾದಿ ಮೂವರ ಜಮೀನಿನಲ್ಲಿ ಕೆನಾಲ್ ಗಾಗಿ ಭೂಮಿ ಸ್ವಾಧಿನ ಆಗಿದೆ ಆದರೆ ಪಹಣಿಯಲ್ಲಿ **37** ಗುಂಟೆ **6**ನೇ ಪ್ರತಿವಾದಿಗೆ ಸೇರಿದೆ ಜಮೀನಿನಲ್ಲಿ ಬಂದಿದೆ ಎಂದರೆ ಸಾಕ್ಷಿಯು **03** ಜನರ ಹೊಲದಲ್ಲಿ ಕೆನಾಲ್ ಹಾದು ಹೋಗಿದೆ ಎನ್ನುತ್ತಾರೆ**.** ವಾದಿ **02** ಎಕರೆ **08** ಗುಂಟೆ ಹೊಲದಲ್ಲಿ ಎಷ್ಟು ಗುಂಟೆ ಕೆನಾಲ್ ಗೆ ಹೋಗಿದೆ ಎಂದು ಗೊತ್ತಿಲ್ಲ ಹಾಗಾಗಿ ಪಹಣಿ ಪ್ರಕಾರ ಅಷ್ಟು ವಿಸ್ತೀರ್ಣದಲ್ಲಿ ಸ್ವಾಧಿನದಲ್ಲಿ ಇಲ್ಲ ಎಂದರೆ ಸರಿ**.**

ಮರು ವಿಚಾರಣೆ: ಇಲ್ಲ.

(ಸಾಕ್ಷಿಯು ನೀಡಿರುವ ಸಾಕ್ಷವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸರಿ ಇದೆ.**

ಸಹಿ**/-**

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.

ದೇವದುರ್ಗ